

## ಆತನೇ ಕ್ಷಮಿಸಬೇಕು!!

ಇತ್ತೀಚೆಗೆ ದಾವಣಗೆರೆಯಲ್ಲಿ ನಡೆದ ಸಮಾವೇಶವೊಂದರಲ್ಲಿ ನಡೆದ ಪ್ರಸಂಗವಿದು.

ನಾನು ಆ ಸಮಾವೇಶಕ್ಕೆ ಪ್ರಕಾಶನವೊಂದರ ಪುಸ್ತಕ ಮಾರಾಟ ಪ್ರತಿನಿಧಿಯಾಗಿ ಭಾಗವಹಿಸಿದ್ದೆ.

ಅಲ್ಲಿಗೆ ಸಾಹಿತಿ ದೇವನೂರ ಮಹಾದೇವ ಅವರೂ ಬಂದಿದ್ದರು.

ಬಹಳ ಹೊತ್ತಿನ ತನಕ ಅವರು ವೇದಿಕೆ ಮೇಲೆ ಆಸೀನರಾಗುವ ಶಿಕ್ಷೆಯನ್ನು ತಪ್ಪಿಸಿಕೊಂಡು ರಿಲ್ಯಾಕ್ಸ್ ಆಗಲು ಹಾಗೆಯೇ ಕಾಲಾಡಿಸಿಕೊಂಡು ನಮ್ಮ ಪುಸ್ತಕ ಮಾರಾಟದ ವಿಭಾಗಕ್ಕೆ ತಲುಪಿದರು. ಅವರು ಪುಸ್ತಕಗಳ ಕಡೆ ಕಣ್ಣು ಹಾಯಿಸುವಾಗ ಅವರನ್ನು ಕುರಿತು,

'ಸರ್, ನಿಮ್ಮ 'ಎದೆಗೆ ಬಿದ್ದ ಅಕ್ಷರ' ಕೃತಿಯನ್ನು 'ವೈಚಾರಿಕ ಬೈಬಲ್' ಎಂದು ಹೇಳಿ ಮಾರಾಟ ಮಾಡುತ್ತಿದ್ದೇವೆ. ನಿಮಗೆ ಒಪ್ಪಿಗೆ ತಾನೇ? ಬೇಡವೆನ್ನಿಸಿದರೆ ಕ್ಷಮಿಸಿಬಿಡಿ' ಎಂದೆ.

'ಆತನೇ ಕ್ಷಮಿಸಬೇಕು' ಅವರೆಂದರು. 'ಯಾರು?' ಎಂದು ಕುತೂಹಲಭರಿತನಾಗಿ ಕೇಳಿದೆ. 'ಏಸುಕ್ರಿಸ್ತ' ಎಂದು ತಣ್ಣಗೆ ಉತ್ತರಿಸಿದರು.

**ಮೇಟಿ ಕೊಟ್ರಪ್ಪ, ಹಗರಿಬೊಮ್ಮನಹಳ್ಳಿ**

## ಬರ್‍ತೀನಿ!

ಒಂದು ದಿನ ಮನೆ ಕೆಲಸಕ್ಕೆ ಬಂದ ನಮ್ಮ ಮನೆ ಕೆಲಸದವಳು. ಒಳಗೆ ಬರುತ್ತಿದ್ದಂತೆ ನಗಲಾರಂಭಿಸಿದಳು. ನಾನು ಏಕೆ? ಎಂದು ಕೇಳಿದಾಗ, 'ಅಕ್ಕಾ, ಯಾರೋ ಮನೆ ಕೆಲಸಕ್ಕೆ ಬೇಕು ಎಂದು ಹೇಳಿಕಳುಹಿಸಿದ್ದರು. ಅವರ ಮನೆಗೆ ಹೋದಾಗ ಒಬ್ಬ ಅಜ್ಜಿ ಮಾತ್ರ ಮನೆಯಲ್ಲಿದ್ದರು. ಅವರ ಜೊತೆ ಕೆಲಸ, ಸಂಬಳದ ಬಗ್ಗೆ ಮಾತನಾಡಿ ಮುಗಿದ ಮೇಲೆ, ನಾನು 'ಬರ್‍ತೀನಿ' ಎಂದು ಹೇಳಿ ಈ ಕಡೆ ಬಂದೆ. ಆ ದಿನ ನಿಮ್ಮ ಮನೆಯಿಂದ ಕೆಲಸ ಮುಗಿಸಿ ಹೊರಟಾಗ. ನಾನು 'ಹೋಗ್ತೀನಿ' ಎಂದು ಹೇಳಿದ್ದಕ್ಕೆ ನೀವು 'ಹಾಗೆ ಹೇಳಬಾರದು. ಹೋಗಿ ಬರ್‍ತೀನಿ ಅಥವಾ ಬರ್‍ತೀನಿ ಎಂದು ಹೇಳಬೇಕು' ಎಂದು ಹೇಳಿಕೊಟ್ಟಿದ್ದೀರಿ. ಅದರಂತೆ ನಾನು ಅಜ್ಜಿಗೆ 'ಬರ್‍ತೀನಿ' ಎಂದು ಹೇಳಿ ಈ ಕಡೆ ಬಂದುಬಿಟ್ಟೆ, ಆದರೆ ಅಕ್ಕಾ, ಪಾಪ, ಆ ಅಜ್ಜಿ, ನಾನು ವಾಪಸ್ಸು ಬರ್‍ತೀನಿ ಅಂತ ತಿಳಿದು, ಇಡೀ ದಿನ ಬಾಗಿಲು ತೆಗೆದುಕೊಂಡು ಕಾಯ್ತಾ ಕುಳಿತಿದ್ದರಂತೆ. ಅವರ ಮಗಳು ಮನೆಗೆ ಬಂದ ಮೇಲೆ ವಿಷಯ ತಿಳಿದು, ಬರ್‍ತೀನಿ ಎಂದರೆ ಆ ಅರ್ಥವಲ್ಲ ಎಂದು ತಿಳಿಸಿ ಹೇಳಬೇಕಾಯಿತಂತೆ' ಎಂದು ವಿವರಿಸಿದಾಗ ನನಗೂ ನಗು ತಡೆಯಲಾಗಲಿಲ್ಲ.



**ರಶ್ಮಿ ದೀಕ್ಷಿತ್ ಆರ್., ಬೆಂಗಳೂರು**

ಚಿತ್ರಗಳು : ಗಣೇಶ ಆಚಾರ್ಯ